## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 269(271)
2. ಸದಸ್ಯರ ಹೆಸರು : ಶ್ರೀ ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 06.03.2025
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಪ್ರಶ್ನೆ | ಉತ್ತರ |
|---|---|
| ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನ ನೀಡಲಾಗುತ್ತಿದೆಯೇ: ಈ ಯೋಜನೆ ಪ್ರಾರಂಭಗೊಂಡಿದ್ದು ಯಾವಾಗ; | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಮಹಿಳಾ ಉದ್ದಿಮೆದಾರರಿಗೆ ಹಾಲಿ ಇರುವ ಅಥವಾ ಹೊಸದಾಗಿ ಸ್ಥಾಪಿಸುವ ಕೈಗಾರಿಕೆಗಳಿಗೆ ಹಾಗೂ ಸೇವಾ ಕ್ಷೇತ್ರಗಳಿಗೆ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಲ ಸೌಲಭ್ಯ ನೀಡಲಾಗುತ್ತದೆ. ಈ ಯೋಜನೆಯನ್ನು ಜನವರಿ 2016ರಿಂದ ಸಂಸ್ಥೆಯಲ್ಲಿ ಅನುಷ್ಠಾನಗೊಳಿಸಲಾಯಿತು. ನಂತರ 2022ರಲ್ಲಿ ಈ ಯೋಜನೆಯನ್ನು ಮಾರ್ಪಡಿಸಿ ಸೇವಾ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಲಾಯಿತು. ಈ ಯೋಜನೆಯಡಿ ಸೇವಾ ಕ್ಷೇತ್ರದಲ್ಲಿ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆ ಘಟಕಗಳನ್ನು ಸ್ಥಾಪಿಸುವ ಮಹಿಳಾ ಉದ್ದಿಮೆದಾರರಿಗೆ 500.00 ಲಕ್ಷ ರೂ.ಗಳವರೆಗೆ ಶೇ.4ರಷ್ಟು ಬಡ್ಡಿ ದರದಲ್ಲಿ ಸಾಲದ ಸೌಲಭ್ಯ ನೀಡಲಾಗುವುದು. ಕೆ.ಎಸ್.ಎಫ್.ಸಿ. ವಿಧಿಸುವ ಸಾಮಾನ್ಯ ಬಡ್ಡಿ ದರದ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮರುಪಾವತಿಸಲಾಗುತ್ತದೆ. |
| ಆ) ಪ್ರಾರಂಭಗೊಂಡಾಗಿನಿಂದ 2024 ಮಾರ್ಚ್ ವರೆಗೂ ಎಷ್ಟು ಮಹಿಳೆಯರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ; (10 ವರ್ಷಗಳ ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಮಾರ್ಚ್ 2024ರ ಅಂತ್ಯಕ್ಕೆ ಒಟ್ಟು 1640 ಮಹಿಳೆಯರು 1,21,695.92ಲಕ್ಷ ರೂಗಳ ಸಾಲ ಸೌಲಭ್ಯವನ್ನು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಪಡೆದಿರುತ್ತಾರೆ. ಜಿಲ್ಲಾವಾರು ಮಂಜೂರಾತಿ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |

| | |
|---|---|
| ಇ) ಈ ಯೋಜನೆ ಪಡೆದ ನಂತರ ಮೂಲ ಹಣ ಸಂಪೂರ್ಣವಾಗಿ ಪಾವತಿಸದೇ ಡಿಫಾಲ್ಟರ್ ಆಗಿರುವವರ ಸಂಖ್ಯೆ ಎಷ್ಟು; ಅವರ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗಿದೆಯೇ? | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಮಾರ್ಚ್ 2024ರ ಅಂತ್ಯಕ್ಕೆ ಒಟ್ಟು 54 ಘಟಕಗಳು ಡಿಫಾಲ್ಟರ್ ಆಗಿರುತ್ತಾರೆ. ಇವರುಗಳ ಮೇಲೆ ಸಂಸ್ಥೆಯ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗಿದೆ. |

ಸಂಖ್ಯೆ: ಆಇ 106 ಆನಿ 2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ

<u>ಅನುಬಂಧ</u>

**ಮಹಿಳಾ ಸಹಾಯಧನ ಯೋಜನೆಯಡಿ ಜಿಲ್ಲಾವಾರು ಮಂಜೂರಾತಿ ವಿವರ (ಜನವರಿ 2016 ರಿಂದ ಮಾರ್ಚ್ 2024ರವರೆಗೆ)**

**(ಮೊತ್ತ ಲಕ್ಷ ರೂ.ಗಳಲ್ಲಿ)**

| ಕ್ರ.ಸಂ. | ಜಿಲ್ಲೆ | 2016-2024 (ಜನವರಿ 2016 ರಿಂದ ಮಾರ್ಚ್ 2024 ರವರೆಗೆ) | |
|---|---|---|---|
| | | ಸಂಖ್ಯೆ | ಮೊತ್ತ |
| 1 | ಬೆಂಗಳೂರು ನಗರ | 185 | 13645.75 |
| 2 | ಬೆಳಗಾವಿ | 82 | 5816.80 |
| 3 | ಬಳ್ಳಾರಿ | 38 | 2315.90 |
| 4 | ಬೀದರ್ | 36 | 3063.00 |
| 5 | ವಿಜಯಪುರ | 32 | 2691.00 |
| 6 | ಚಿಕ್ಕಮಗಳೂರು | 40 | 4935.50 |
| 7 | ಚಿತ್ರದುರ್ಗ | 53 | 3578.00 |
| 8 | ದಕ್ಷಿಣ ಕನ್ನಡ | 85 | 6621.50 |
| 9 | ಧಾರವಾಡ | 85 | 4927.50 |
| 10 | ಕಲಬುರಗಿ | 60 | 4429.00 |
| 11 | ಹಾಸನ | 61 | 4545.00 |
| 12 | ಕೊಡಗು | 41 | 4364.00 |
| 13 | ಕೋಲಾರ | 42 | 2459.76 |
| 14 | ಮಂಡ್ಯ | 53 | 4325.75 |
| 15 | ಮೈಸೂರು | 126 | 8843.85 |
| 16 | ರಾಯಚೂರು | 43 | 3537.36 |
| 17 | ಶಿವಮೊಗ್ಗ | 44 | 3026.00 |
| 18 | ತುಮಕೂರು | 104 | 6059.45 |
| 19 | ಉತ್ತರ ಕನ್ನಡ | 29 | 3412.50 |
| 20 | ಬೆಂಗಳೂರು ಗ್ರಾಮಾಂತರ | 83 | 4995.80 |
| 21 | ಚಾಮರಾಜನಗರ | 23 | 1543.75 |

| | | | |
|---|---|---|---|
| 22 | ದಾವಣಗೆರೆ | 59 | 3312.00 |
| 23 | ಬಾಗಲಕೋಟೆ | 43 | 3943.00 |
| 24 | ಗದಗ | 27 | 2346.00 |
| 25 | ಹಾವೇರಿ | 29 | 2598.50 |
| 26 | ಉಡುಪಿ | 45 | 3364.60 |
| 27 | ಕೊಪ್ಪಳ | 37 | 2930.00 |
| 28 | ರಾಮನಗರ | 19 | 1279.00 |
| 29 | ಚಿಕ್ಕಬಳ್ಳಾಪುರ | 27 | 1837.65 |
| 30 | ಯಾದಗಿರಿ | 9 | 948.00 |
| | **ಒಟ್ಟು** | **1640** | **121695.92** |